ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ತರೀಕೆರೆ

ಸಿ.ಸಿ.ನಂ.1012/2024

ಚಾಸಾ:10 ಪ್ರಾಸಾ: 5

ದಿನಾಂಕಃ 24.07.2026 ರಂದು ಕ್ರಮ ಪ್ರಕಾರ ಪ್ರತಿಜ್ಞಾವಿಧಿ ಭೋಧಿಸಿದೆ.

| | |
|---|---|
| ಸಾಕ್ಷಿದಾರರ ಹೆಸರು– | ಅಭಿಶೇಕ |
| ತಂದೆಯ ಹೆಸರು– | ಕೂಡಿಗೌಡ |
| ವಯಸ್ಸು – | 30 ವರ್ಷ |
| ಉದ್ಯೋಗ– | ಎ.ಎಸ್.ಐ., ಶೃಂಗೇರಿ ಪೋಲೀಸ್ ಠಾಣೆ |
| ವಾಸ– | ಶೃಂಗೇರಿ |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

**1.** ನಾನು ಫೆಬ್ರವರಿ 2023 ರಿಂದ ಫೆಬ್ರವರಿ 2024 ರವರೆಗೆ ತರೀಕೆರೆಯ ಪೋಲೀಸ್ ಠಾಣೆಯಲ್ಲಿ ಸಂಚಾರ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

**2.** ದಿನಾಂಕ **09.06.2023** ರಂದು ನಾನು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ–**7** ರವರಿಂದ ಪಡೆದು ಅದನ್ನು ಪರಿಶೀಲಿಸಿರುತ್ತೇನೆ.

**3.** ನಂತರ ಅದೇ ದಿನ ನಾನು ಎಫ್.ಎಸ್.ಎಲ್. ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ.

**4.** ನಂತರ ಅದೇ ದಿನ ಪ್ರಕರಣದ ತನಿಖೆ ಪೂರ್ಣಗೊಂಡ್ಡಿರಿಂದ ಮತ್ತು ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷಾಧಾರಗಳು ಕಂಡು ಬಂದಿದ್ದರಿಂದ ಆರೋಪಿಯ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

**5.** ಈಗ ನನಗೆ ತೋರಿಸಿದ ದಾಖಲೆಯು ನಾನು ಚಾಸಾ–**9** ರವರಿಂದ ಪಡೆದುಕೊಂಡ ಎಫ್.ಎಸ್.ಎಲ್. ವರದಿಯಾಗಿದ್ದು ಅದನ್ನು ಈಗ ನಿಪಿ–**6** ಹಾಗೂ ಅದರ ಮೇಲೆ ಇರುವ ನನ್ನ ಸಹಿಯನ್ನು ನಿಪಿ–**6**(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ್ ಎಸ್ ಸಿ ವಕೀಲರಿಂದಃ**

6. ನಾನು ಚಾಸಾ–9 ರವರಿಂದ ಸುಳ್ಳು ವರದಿ ಪಡೆದುಕೊಂಡು ಆರೋಪಿಯು ಯಾವುದೇ ತಪ್ಪು ಮಾಡದಿದ್ದರೂ ಸಹ ಮತ್ತು ಆರೋಪಿಯ ವಿರುದ್ದ ಯಾವುದೇ ಸಾಕ್ಷ್ಯಾದಾರಗಳು ಇರುವುದಿಲ್ಲ ಎಂದು ನನಗೆ ಕಂಡು ಬಂದಿದ್ದರೂ ಸಹ ನಾನು ಆತನ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿ ಈಗ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ</u>**: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

Sd/-

(ಮುಜಫರ್)

ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ,

ತರೀಕೆರೆ